(SRI AZEEZ SAIT)

Division and Mangalore Division. As a matter of fact the Division has got only 64 routes and if the Division has to be bifurcated—Mangalore Division—the other routes have to be nationalised. So the matter is under the consideration of the Board and I am sure it will have an early effect.

ಶ್ರೀ ಕೆ. ಎಂ. ನಾಗಣ್ಣ.—ಪರಿಶೀಲಿಸುತ್ತಿದ್ದಾರೆ ಎಂದರೆ ಯಾವಾಗಿನಿಂದ ಕನ್‌ಸಿಡರು ಮಾಡುತ್ತಿದ್ದಾರೆ ಮತ್ತು ಇದು ಯಾವಾಗ ಮುಗಿಯುತ್ತದೆ ? ಅದಷ್ಟು ಜಾಗ್ರತೆ ಎಂದರೆ ಇದರ ಅರ್ಥವೇನು ?

ಶ್ರೀ ಅಜೀಜ್ ಸೇಟ್.—ಇದು ಸುಮಾರು ಒಂದು ತಿಂಗಳ ಹಿಂದೆ ಬಂತು ಮತ್ತು ಇದರ ಬಗ್ಗೆ ನೋಚನೆ ಕೊಟ್ಟದ್ದು ಕೂಡ ನಾನೇ. ಇದರ ಬಗ್ಗೆ ಇಲ್ಲಿರುವ ಬೋರ್ಡಿನವರು ಎಲ್ಲ ಅಂಕೆ ಅಂಶಗಳನ್ನು ಶೇಖರಿಸಿ ಸರಕಾರಕ್ಕೆ ಸಲಹೆ ಕಳುಹಿಸಬೇಕು. ಇಲ್ಲಿ ಮಂಗಳೂರು ಹಾಗೂ ಪುತ್ತೂರುಗಳಲ್ಲಿ ಎರಡು ಡಿಪೋಗಳಿವೆ. ಇದರಲ್ಲಿ ಚಿಕ್ಕಮಗಳೂರು ಹಾಸನ ಶಿವಮೊಗ್ಗ, ಹಾಗೂ ಬೆಂಗಳೂರು ಡಿಪೋಗಳೂ ಇವೆ. ಇದನ್ನೆಲ್ಲಾ ವಿವರವಾಗಿ ನೋಡಬೇಕಾಗಿದೆ.

Sri R. GUNDU RAO.—The hon. Minister said that the proposal is before the Board. May I know whether the Board is powerful or the Government is powerful ?

Sri AZEEZ SAIT.—The Board is an autonomous body. The Government have a right to suggest and alter certain decisions of the Board. The Government is always powerful. The Board is given certain powers and the Board has to take a decision.

Municipality for Buntwal, Buntwalmuda and Panemangalore

680. Sri B. V. KAKKILAYA (Buntwal).—

Will the Minister for Municipal Administration be pleased to state :—

(*a*) whether there is a proposal to constitute a Municipality by combining the Buntwal Town Panchayat, the Buntwal Muda Panchayat and the Panemangalore Panchayat ;

(*b*) whether all the three Panchayats have passed resolution to this effect and forwarded to the Government ;

(*c*) the action if any the Government has taken in this matter ?

Sri B. BASAVALINGAPPA (Minister for Municipal Administration).—

(*a*) No.

(*b*) Does not arise in view of reply to clause (*a*).

(*c*) Does not arise in view of reply to clause (*a*).

ಶ್ರೀ ಬಿ. ವಿ. ಕಕ್ಕಿಲಾಯ.—ಬಂಟ್ವಾಳ ಹಾಗೂ ಪಾಣೆ ಪಂಚಾಯತಿಗಳನ್ನು ಸೇರಿಸಿ ಇಲ್ಲಿನ ತಾಲೂಕು ಹೆಡ್‌ಕ್ವಾರ್ಟರಿನಲ್ಲಿ ಮುನಿಸಿಪಾಲಟಿಗಳನ್ನು ಮಾಡುವುದು ಸೂಕ್ತ ಎಂದು ಸರ್ಕಾರಕ್ಕೆ ಮನವಿ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೆ? ಇದರ ಬಗ್ಗೆ ಸರಕಾರದ ಅಭಿಪ್ರಾಯವೇನು?

† ಶ್ರೀ ಬಿ. ಬಸವಲಿಂಗಪ್ಪ.—ಸೂಕ್ತ ಎಂದು ತಿಳಿದುಕೊಂಡು ಇಲ್ಲಿಂದ ಬಂದ ರಿಪೋರ್ಟನ್ನು ಡಿವಿಜನಲ್ ಕಮಿಷನರ್‌ರವರ ಕಡೆಗೆ ಕಳುಹಿಸಲಾಗಿದೆ, ಅವರಿಂದ ವರದಿ ಬಂದ ನಂತರ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮೂರು ಪಂಚಾಯತಿಗಳೂ ಮುನಿಸಿಪಾಲಟಿ ಮಾಡಬೇಕೆಂದು ನಿರ್ಣಯ ಮಾಡಿ ಸರಕಾರಕ್ಕೆ ಕಳುಹಿಸಿರಲಿಲ್ಲವೇ? ಇದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಬಸವಲಿಂಗಪ್ಪ.—ನಿರ್ಣಯ ಮಾಡಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆ. ಇದನ್ನು ಈಗ ಡಿವಿಜನರ್ ಕಮಿಷನರ ಕಡೆಗೆ ಕಳುಹಿಸಲಾಗಿದೆ, ಇದರಂತೆ ಎಲ್ಲಾ ಟೌನುಗಳಲ್ಲೂ ಮುನಿಸಿಪಾಲಟಿಗಳನ್ನು ಮಾಡಬೇಕೆಂಬುದು ಸರಕಾರದ ಅಭಿಪ್ರಾಯ. ಇದರ ಬಗ್ಗೆ ತೀರ್ಮಾನವನ್ನು ಅವರ ವರದಿ ಬಂದ ಮೇಲೆ ತೆಗೆದುಕೊಳ್ಳಬೇಕಾಗಿದೆ.

Unitwise Seniority of Forest Department

693. Sri B. SATHYANARAYANA SINGH (Hospet).—

Will the Minister for Agriculure and Forests be pleased to state :—

(*a*) whether the Government has directed the Chief Conservator of Forests to implement unitwise Seniority;

(*b*) if so, whether it has come to the notice of the Government that the above principle has not been implemented in Forest Department ?

(*c*) the reasons for the same ?

Sri K. H. PATIL (Minister for Agriculture and Forests).—

(*a*) Yes.

(*b*) Yes.

(*c*) This could not be given effect to immediately as it leads to administrative dislocation. The matter is being reviewed.

ಶ್ರೀ ಬಿ. ಸತ್ಯನಾರಾಯಣಸಿಂಗ್.—(೩) ಗೆ ಉತ್ತರವಾಗಿ ಇದನ್ನು ಪುನರ್ ಪರಿಶೀಲನೆ ಆಗುತ್ತಿದೆ ಎಂದರೆ ಇದಕ್ಕೆ ಇದ್ದ ಕಾರಣಗಳಾದರೂ ಏನು? ಅದನ್ನು ಸರಕಾರ ತಿಳಿಸುತ್ತದೆಯೇ?

† ಶ್ರೀ ಕೆ. ಹೆಚ್. ಪಾಟೀಲ್.—ಬೇರೆ ಬೇರೆ ಭಾಗಗಳಿಂದ ಜನ ಬಂದು ಮೈಸೂರು ರಾಜ್ಯಕ್ಕೆ ಸೇರಿರುವುದರಿಂದ ಇವರೆಲ್ಲರ ಸೀನಿಯಾರಿಟಿ ಲಿಸ್ಟು ಮಾಡುವಾಗ ಬಹಳ ಜನರು ಇದರಲ್ಲಿ ಅನ್ಯಾಯಗಳಾಗಿವೆ ಎಂದು ಅಭಿಪ್ರಾಯ ಪಟ್ಟರು ಮತ್ತು ಇದೇ ವಿಷಯವಾಗಿ ಕೋರ್ಟಿಗೂ ಹೋದರು. ಆನಂತರ ಸರಕಾರ ಮಾಡಿದ ಸೀನಿಯಾರಿಟಿ ಪಟ್ಟಿಯನ್ನು ಚಾಲೆಂಜು ಮಾಡಿದರು, ಇದರ ಸಲುವಾಗಿ ಹೈಕೋರ್ಟಿನಲ್ಲಿ ಒಂದು ನಿರ್ಣಯವಾಯಿತು. ಇದು ಸರಿಯಾಗಿಲ್ಲ ಎಂದು ಸುಪ್ರೀಂ ಕೋರ್ಟುವರಗೆ ಹೋಗಿರುವ ಪ್ರಕರಣಗಳೂ ಇದರಲ್ಲಿವೆ, ಸುಪ್ರೀಂ ಕೋರ್ಟಿನಲ್ಲಿ ನಿರ್ಣಯ ಆಗುವ ತನಕ ಐದು ವಿಭಾಗಗಳ ಎಂದರೆ ಬೊಂಬಾಯಿ ಭಾಗದವರ ಲಿಸ್ಟು ಇನ್ನೊಂದು